**C**

**CCE PF**
**CCE PR**
**REVISED**


**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**S.S.L.C. EXAMINATION, MARCH / APRIL, 2019**


# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 21. 03. 2019 ] **ಸಂಕೇತ ಸಂಖ್ಯೆ : 01-K**

Date : 21. 03. 2019 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

**[ ಗರಿಷ್ಠ ಅಂಕಗಳು : 125**

**[ Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪಠ್ಯಪೂರಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.**<br>**(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?<br>***ಉತ್ತರ :***<br>ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಔಷಧ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು. | |
| 2. | ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?<br>***ಉತ್ತರ :***<br>ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಲಂಡನ್ನಿನಲ್ಲಿ ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು ? | |
| | ***ಉತ್ತರ :*** | |
| | ಲಂಡನ್ನಿನಲ್ಲಿ ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರು 'ಟ್ರಾಫಲ್ಗಾರ್ ಸ್ಕ್ವೇರ್'. | |
| 4. | 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು ? | |
| | ***ಉತ್ತರ :*** | |
| | 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಹಳಕಟ್ಟಿ. | |
| 5. | ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ? | |
| | ***ಉತ್ತರ :*** | |
| | ಶಾನುಭೋಗರ 'ಬ್ರಹ್ಮಾಸ್ತ್ರ' ಖಿರ್ದಿ ಪುಸ್ತಕ. | |
| 6. | ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು ? | |
| | ***ಉತ್ತರ :*** | |
| | ಸುಕುಮಾರಸ್ವಾಮಿಗೆ ಸೆಟ್ಟಿಯ ಪಟ್ಟವನ್ನು ಕಟ್ಟಲಾಯಿತು. | |
| 7. | ನದೀಜಲಗಳು ಏನಾಗಿವೆ ? | |
| | ***ಉತ್ತರ :*** | |
| | ನದೀಜಲಗಳು ಕಲುಷಿತವಾಗಿವೆ. | |
| 8. | ಕವಿ ಬೇಂದ್ರೆಯವರ ಪ್ರಕಾರ ಹಕ್ಕಿಯ ಕಣ್ಣುಗಳು ಯಾವುವು ? | |
| | ***ಉತ್ತರ :*** | |
| | ಹಕ್ಕಿಯ ಕಣುಗಳು ಸೂರ್ಯ–ಚಂದ್ರರು. | |
| 9. | ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ? | |
| | ***ಉತ್ತರ :*** | |
| | ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ. | |
| 10. | ಕರ್ಣನು ಕೃಷ್ಣನಿಗೆ ತಾನು ಯಾವ ಸಿರಿಗೆ ಸೋಲುವವನಲ್ಲ ಎಂದನು ? | |
| | ***ಉತ್ತರ :*** | |
| | ಕರ್ಣನು ಕೃಷ್ಣನಿಗೆ ತಾನು ಮಹಿಯ ರಾಜ್ಯದ ಸಿರಿಗೆ ಸೋಲುವವನಲ್ಲ ಎಂದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ? | |
| | ***ಉತ್ತರ :*** | |
| | ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ. | |
| 12. | ಕವಿ ಕುವೆಂಪುರವರು ನೋಡಿದ ಅಡಿಕೆಯ ತೋಟ ಎಲ್ಲಿದೆ ? | |
| | ***ಉತ್ತರ :*** | |
| | ಕವಿ ಕುವೆಂಪುರವರು ನೋಡಿದ ಅಡಿಕೆಯ ತೋಟ ಬನದ ಅಂಚಿನಲ್ಲಿದೆ. | |
| 13. | ದಿನಪಸುತ ಎಂದರೆ ಯಾರು ? | |
| | ***ಉತ್ತರ :*** | |
| | ದಿನಪಸುತ ಎಂದರೆ ಕರ್ಣ. | |
| 14. | ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು ? | |
| | ***ಉತ್ತರ :*** | |
| | ದ್ರೋಣನು ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದನು. | |
| 15. | ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ? | |
| | ***ಉತ್ತರ :*** | |
| | ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ. | |
| 16. | ಹಾಲುಗಲ್ಲದ ಹಸುಳೆ ಏನು ಮಾಡುತ್ತಿದ್ದಾಳೆ ? | |
| | ***ಉತ್ತರ :*** | |
| | ಹಾಲುಗಲ್ಲದ ಹಸುಳೆ ಮುಸುರೆ ತಿಕ್ಕುತ್ತಿದ್ದಾಳೆ. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು ? | |
| | ***ಉತ್ತರ :*** | |
| | ಲಂಡನ್ ಪಟ್ಟಣದ ಪೇಟೆ ಬೀದಿಯಲ್ಲಿರುವ 'ವೂಲವರ್ಥ' ಎಂಬ ಸ್ಟೇಷನರಿ ಅಂಗಡಿಯಲ್ಲಿ ಎಲ್ಲಾ ತರದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಹೀಗೆ ಎಲ್ಲವೂ ಇಲ್ಲಿ ದೊರೆಯುತ್ತವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?<br>*ಉತ್ತರ :*<br>ಲಂಡನ್ನಿನ ಎಲ್ಲಾ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಾಹಾರ ಗೃಹಗಳಲ್ಲಿ ಮಾಣಿ ಕೆಲಸ, ದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್, ಕಾರಕೂನ ಕೆಲಸ, ಸಿನಿಮಾಗೃಹದಲ್ಲಿ ಜಾಗ ಹುಡುಕಿ ಕೊಡುವ ಕೆಲಸ, ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರ ಕೆಲಸಗಳಲ್ಲಿ ಲಂಡನ್ನಿನ ಹೆಣ್ಣುಮಕ್ಕಳು ನಿಯುಕ್ತರಾಗಿರುತ್ತಾರೆ. | |
| 19. | ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು ?<br>*ಉತ್ತರ :*<br>ಡಾ. ಅಶೋಕ ಪೈ ಅವರು ಮನಸ್ಸಿನ ಬಗ್ಗೆ ನಡೆದ ಒಂದು ಸಂಶೋಧನಾ ಸತ್ಯವನ್ನು ಹೀಗ ಹೇಳಿದ್ದಾರೆ. ಕೆಲವರು ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾಗ, ಇನ್ನು ಕೆಲವರು ಇದರ ಅರಿವಿಲ್ಲದೆ ತಮ್ಮಷ್ಟಕ್ಕೆ ತಾವು ಪಕ್ಕದ ಕೊಠಡಿಯಲ್ಲಿ ಮಾತನಾಡುತ್ತಿರುತ್ತಾರೆ. ಟೆಲಿವಿಷನ್‌ನಲ್ಲಿ ಬರುವ ಕೊಲೆಯ ದೃಶ್ಯ ನೋಡುತ್ತಿರುವವರ ದುಃಖದ ಭಾವನೆ ಪಕ್ಕದ ಕೊಠಡಿಯಲ್ಲಿರುವವರ ಮನಸ್ಸಿನಲ್ಲೂ ದುಗುಡ ಉಂಟುಮಾಡುತ್ತದೆ. ನೃತ್ಯದ ದೃಶ್ಯ ಖುಷಿಯ ಭಾವನೆಯನ್ನು ಉಂಟುಮಾಡುತ್ತದೆ. ಯಾವ ಜೀವಿಯೂ ತನ್ನಷ್ಟಕ್ಕೆ ತಾನಿರುವುದಿಲ್ಲ. ಒಂದು ಜೀವಿಗೆ ಆಗುವ ದುಃಖ–ದುಮ್ಮಾನ ಎಲ್ಲಾ ಜೀವಿಗಳಿಗೂ ಆಗುತ್ತದೆ ಎಂದಿದ್ದಾರೆ. | |
| 20. | ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ಸಂಕ್ಷಿಪ್ತವಾಗಿ ತಿಳಿಸಿ.<br>*ಉತ್ತರ :*<br>ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಅದೇ ದಾರಿಯಲ್ಲಿ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರದಾರಿ ಇರುವಾಗ ಎತ್ತುಗಳು ಮುಂದೆ ಹೋಗದೆ ಕಣಿ ಹಾಕಿಕೊಂಡವು. ಹುಲಿಯ ಘರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದ, ರೈತರ ಮಾತು ಕೇಳಿ ಹುಲಿ ಓಡಿಹೋಯಿತು. ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ಗುಂಡು ಹಾರಿಸಿ, ಗಲಭೆ ಮಾಡುತ್ತ, ಪಂಜು ಹೊತ್ತಿಸಿಕೊಂಡು ಬರುತ್ತಿದ್ದಾಗ, ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರು ಹಾಕಿ ಎಚ್ಚರಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?<br>***ಉತ್ತರ :***<br>ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿ, ಖಜಾನೆಗೆ ಹಣ ಕಟ್ಟಿ, ವಾಪಸ್ಸು ಹೊರಡುವ ವೇಳೆ ಸಂಜೆ ಆರು ಘಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಕಾಡುದಾರಿ, ಬೆಳುದಿಂಗಳ ದಿನ, ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಯೋಚಿಸುತ್ತಾ ಬೇಗಬೇಗ ಹೆಜ್ಜೆಯಿಡುತ್ತಾ ನಡೆದರು. | |
| 22. | ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯನ್ನು ನೀಡಿದನು ?<br>***ಉತ್ತರ :***<br>ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ವ್ಯಾಪಾರ ಮುಗಿಸಿಬಂದು ಮಧುರಾಪುರದ ಉದ್ಯಾನದಲ್ಲಿ ಬೀಡುಬಿಟ್ಟಿದ್ದರು. ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುಷ್ಟಬುದ್ಧಿಯನ್ನು ಕರೆದು ಸಂಪತ್ತನ್ನೆಲ್ಲ ಹಂಚಿಕೊಳ್ಳೋಣ ಎಂದಾಗ, ನಾವಿಬ್ಬರೂ ಈ ಸಂಪತ್ತನ್ನೆಲ್ಲ ಹಂಚಿಕೊಂಡು ಮನೆಯಲ್ಲಿಯೇ ಸ್ವತಂತ್ರವಾಗಿ ಇರುವವರಲ್ಲ, ಮತ್ತೆ ವ್ಯಾಪಾರಕ್ಕೆ ಹೋಗಲೇಬೇಕು. ಆದ್ದರಿಂದ ನಮ್ಮಿಬ್ಬರಿಗೆ ಖರ್ಚಿಗೆ ಬೇಕಾದಷ್ಟನ್ನು ತೆಗೆದುಕೊಂಡು ಉಳಿದ ಸಂಪತ್ತನೆಲ್ಲ ವಟವೃಕ್ಷದ ಬುಡದಲ್ಲಿ ಹೂತಿಡೋಣ ಎಂದು ಧರ್ಮಬುದ್ಧಿಗೆ ದುಷ್ಟಬುದ್ಧಿ ಸಲಹೆ ನೀಡುತ್ತಾನೆ. | |
| 23. | ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು ?<br>***ಉತ್ತರ :***<br>ಅರಸ ವೃಷಭಾಂಕ ಮತ್ತು ಸುಕುಮಾರಸ್ವಾಮಿಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಬಂಧುಗಳು, ಪರಿವಾರದವರು ಶುಭಕರವಾದ ಬಿಳಿಸಾಸಿವೆಯ ಅಕ್ಷತೆಯನ್ನು ಹಾಕಿದಾಗ ಸುಕುಮಾರಸ್ವಾಮಿಗೆ ಒತ್ತಿದಂತಾಗಿ ಸೊಂಟವನ್ನು ಅಲುಗಾಡಿಸುತ್ತಾನೆ. ದೀಪವನ್ನು ನೋಡಿದಾಗ ಕಣ್ಣೀರು ಸುರಿಸುತ್ತಾನೆ. ಊಟ ಮಾಡುವಾಗ ಅರ್ಧ ಆಹಾರವನ್ನು ನುಂಗಿ, ಅರ್ಧ ಆಹಾರವನ್ನು ಉಗುಳುವುದನ್ನು ಕಂಡು ಆಹಾರದ ಮೇಲಿನ ಅರುಚಿಯಿಂದ ಹೀಗೆ ಮಾಡುತ್ತಿದ್ದಾನೆ. ಈತನಿಗೆ ಏನೋ ವ್ಯಾಧಿಯಿರಬಹುದೆಂದು ಅರಸ ಭಾವಿಸುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ? | |
| | ***ಉತ್ತರ :*** | |
| | ಸುಕುಮಾರಸ್ವಾಮಿಯು ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿಯಿಂದ ಕೂಡಿದ ಯುವಕನಾಗಿದ್ದು, ಮೂವತ್ತೆರಡು ಲತಾಗೃಹಗಳಲ್ಲಿ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವಭಾವ, ವಿಲಾಸ, ಸೌಂದರ್ಯಗಳಿಗೆ ಒಡತಿಯರಾದ ಅಪ್ಸರೆಯರನ್ನು ಹೋಲುವ ಮೂವತ್ತೆರಡು ದಿವ್ಯರಾದ ಹೆಂಡತಿಯರಿದ್ದು, ಮನರಂಜನೆಗಾಗಿ ಮೂವತ್ತೆರಡು ನೃತ್ಯಾಂಗನೆಯರು ನಾಟ್ಯವನ್ನು ಮಾಡುತ್ತಿದ್ದರು. ಈತನ ಬಳಿ ಮೂವತ್ತೆರಡು ಕೋಟಿ ಚಿನ್ನದ ನಾಣ್ಯಗಳು, ಪಂಚರತ್ನಗಳು ಇದ್ದು ಇವುಗಳಿಂದ ಸುಕುಮಾರಸ್ವಾಮಿಯು ಸುಖಭೋಗಗಳನ್ನು ಅನುಭವಿಸುತ್ತಿದ್ದನು. | |
| 25. | ಕವಿ ಕುವೆಂಪು ಅವರಿಗೆ ಆಗಸದಿಂದ ಸಂಜೆಯ ಬಿಸಿಲವರೆಗೂ ಎಲ್ಲೆಲ್ಲಿ ಹಸುರು ಕಂಡುಬಂದಿದೆ ? | |
| | ***ಉತ್ತರ :*** | |
| | ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರಿನೊಂದಿಗೆ ಆಗಸವು ಸಹ ಹಸುರಿನಿಂದ ಕೂಡಿದಂತೆ ಕಾಣುತ್ತಿದೆ. ಹಾಗೇ ಮುಗಿಲುಗಳು ಸಹ ಹಸುರಿನಿಂದ ಕೂಡಿದೆ. ಗದ್ದೆಯಾ ಬಯಲು ಹಸುರಿನಿಂದ ಕಂಗೊಳಿಸುತ್ತಿದೆ. ಮಲೆಗಳು, ಕಣಿವೆಗಳು ಸಸ್ಯ ಸಮೃದ್ಧಿಯ ಹಸುರಿನಿಂದ ಕೂಡಿವೆ. ಇಡೀ ಪ್ರಕೃತಿಯೇ ಹಸುರಾಗಿರುವುದರಿಂದ ಸಂಜೆಯ ಬಿಸಿಲೂ ಕೂಡ ಹಚ್ಚ ಹಸುರನ್ನೇ ಮೈಗೂಡಿಸಿಕೊಂಡಿದೆ. ಹೀಗೆ ಕವಿ ಕುವೆಂಪುರವರಿಗೆ ಆಗಸದಿಂದ ಸಂಜೆಯಿ ಬಿಸಿಲವರೆಗೂ ಹಸುರು ಕಂಡು ಬಂದಿದೆ. | |
| 26. | ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ತಿಳಿಸಿ. | |
| | ***ಉತ್ತರ :*** | |
| | ರಘುವಂಶದ ರಾಜನಾದ ಶ್ರೀರಾಮನ ಯಾಗದ ಕುದುರೆ ಎಂದು ತಿಳಿದು ಪರಾಕ್ರಮಿಗಳಾದ ರಾಜರು ಕುದುರೆಗೆ ನಮಸ್ಕರಿಸಿ ಕಳುಹಿಸುತ್ತಿದ್ದರು. ಹೀಗೆ ಯಾಗದ ಕುದುರೆ ಭೂಮಿಯಲ್ಲಿ ಸಂಚರಿಸುತ್ತಾ ವಾಲ್ಮೀಕಿ ಮುನಿಯ ಆಶ್ರಮದ ಕಡೆಗೆ ಬರುತ್ತದೆ. ಮುನಿಯ ಆಶ್ರಮದ ವಿನಿಯೋಗಕ್ಕಾಗಿ ಇದ್ದ ಉದ್ಯಾನವನದಲ್ಲಿ ಬೆಳೆದಿದ್ದ ಹಸಿರು ಹುಲ್ಲನ್ನು ನೋಡಿ, ತಿನ್ನಲು ಬಯಸಿ ಯಜ್ಞಾಶ್ವವು ವಾಲ್ಮೀಕಿಯ ಆಶ್ರಮದ ವನವನ್ನು ಪ್ರವೇಶಿಸುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು ?<br>*ಉತ್ತರ :*<br>ದ್ರೋಣನು ಶಪಥ ಮಾಡುತ್ತಾ, 'ಎಲೈ, ಖಳನೇ ನೊಣಕ್ಕೆ ತಿಪ್ಪೆಯೇ ಶ್ರೇಷ್ಠವಾದದ್ದು ಎಂಬ ಗಾದೆ ಮಾತಿನಂತೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ. ನಾನು, ನೀನು ಒಂದೇ ಗುರುವಿನ ಬಳಿ ವಿದ್ಯಾಭ್ಯಾಸ ಮಾಡಿದ್ದೇವೆಂಬ ಕಾರಣದಿಂದ ನಿನ್ನನ್ನು ಕೊಲ್ಲದೇ ಬಿಡುತ್ತಿದ್ದೇನೆ. ಆದರೆ ಈ ಸಭಾ ಮಧ್ಯದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದಲೇ ಗಾಬರಿಯಾಗುವಂತೆ ಕಟ್ಟಿಸದಿದ್ದರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೇ?' ಎಂದು ಹೇಳಿದನು. | |
| 28. | ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?<br>*ಉತ್ತರ :*<br>ಪರಶುರಾಮನು ತನ್ನಲ್ಲಿದ್ದ ಎಲ್ಲಾ ಆಭರಣಗಳನ್ನು ಬೇಡಿದವರಿಗೆ ನೀಡಿದ್ದ, ಭೂಮಿಯನ್ನು ಗುರುವಿಗೆ ನೀಡಿ, ಜಟಾಧಾರಿಯಾಗಿ ತಪಸ್ಸಿಗೆ ಹೋಗಲು ಸಿದ್ಧನಾಗಿದ್ದನು. ಇಂತಹ ಸಮಯದಲ್ಲಿ ಸಂಪತ್ತನ್ನು ಬೇಡಲು ಬಂದ ದ್ರೋಣರಿಗೆ ಅರ್ಘ್ಯವನ್ನು ನೀಡಲು ಚಿನ್ನದ ಪಾತ್ರೆ ಇಲ್ಲವಾದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ನೀಡಿದನು. | |
| 29. | ವಿವೇಕಾನಂದರು ಏಕೆ ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋಧಿಯಾಗಿದ್ದರು ?<br>*ಉತ್ತರ :*<br>ದೈಹಿಕ ಹಸಿವನ್ನು ಹಿಂಗಿಸುವುದು ವಿವೇಕಾನಂದರ ಮೊದಲ ಆದ್ಯತೆಯಾಗಿತ್ತು. ಆನಂತರ ಆತ್ಮದ ಹಸಿವು, ವೇದಾಂತದ ಹಸಿವು, ಸಾಂಸ್ಥಿಕವಾದ ಧಾರ್ಮಿಕ ಹಸಿವು. ಈ ಕಾರಣದಿಂದಾಗಿಯೇ ವಿವೇಕಾನಂದರು ಯಾವತ್ತೂ ಧಾರ್ಮಿಕ ಮೂಲಭೂತವಾದಿಯಾಗಿರಲಿಲ್ಲ, ಬದಲಾಗಿ ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋಧಿಯಾಗಿದ್ದರು. | |
| 30. | ಭಗತ್‌ಸಿಂಗ್ ತನಗೆ ಪ್ರಿಯವಾದ ಮಾವಿನ ಹಣ್ಣೊಂದನ್ನು ನಿರಾಕರಿಸಿದ್ದಕ್ಕೆ ಕಾರಣ ಹೇಗೆ ತಿಳಿಯಿತು ?<br>*ಉತ್ತರ :*<br>ಹನ್ನೆರಡು ವರ್ಷದ ಬಾಲಕ ಶಾಲೆಗೆ ಹೋಗದೆ ಅಮೃತಸರದ ಜಲಿಯನ್ ವಾಲಾಬಾಗ್‌ಗೆ ಹೋಗಿ ಅಂತರ್ಮುಖಿಯಾಗಿ ನಿಂತು, ನಂತರ ಅಲ್ಲಿದ್ದ ಮಣ್ಣನ್ನು ಹಣೆಗಿಟ್ಟುಕೊಂಡು ಇನ್ನಷ್ಟನ್ನು ಡಬ್ಬಿಯಲ್ಲಿ ಶೇಖರಿಸಿಕೊಂಡು ರಾತ್ರಿ ಮನೆಗೆ ಹಿಂದಿರುಗಿದಾಗ ಎಂದಿನಂತೆ ಸಹೋದರಿ ಊಟಕ್ಕೆ ಎಬ್ಬಿಸಿದಾಗ ಒಲ್ಲೆ ಎನ್ನುತ್ತಾನೆ. ಕಾರಣ ಕೇಳಿದಾಗ ಮನೆಯ ಹಿಂಭಾಗಕ್ಕೆ ಕರೆದೊಯ್ದು ರಕ್ತಸಿಕ್ತವಾದ ಮಣ್ಣನ್ನು ತೋರಿಸುತ್ತಾನೆ. ಅದು ಎಲ್ಲಿಯದೆಂದು ತಿಳಿದಾಗ ಭಗತ್‌ಸಿಂಗ್‌ನು ಮಾವಿನ ಹಣ್ಣೊಂದನ್ನು ನಿರಾಕರಿಸಿದ್ದಕ್ಕೆ ಕಾರಣ ತಿಳಿಯುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31. | ವರ್ತಕನು ನಗರದಿಂದ ಹಳ್ಳಿಗೆ ಹೋಗಬೇಕಾಗಿ ಬಂದ ಸಂದರ್ಭವನ್ನು ತಿಳಿಸಿ.<br>***ಉತ್ತರ :***<br>ಮೃದು ಸ್ವಭಾವದ ವರ್ತಕ ಧರ್ಮವಂತನಾಗಿದ್ದ. ಹೀಗಿದ್ದಾಗ ವರ್ತಕನಿಗೆ ಕಷ್ಟಗಳು ಶುರುವಾದವು. ಅವನ ವ್ಯಾಪಾರ ಕುಸಿದು ಬಿತ್ತು. ಬರಬೇಕಾಗಿದ್ದ ಹಣ ಬರಲಿಲ್ಲ. ಸರಕುಗಳನ್ನು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂದಿರುಗಲಿಲ್ಲ. ಅವನ ಸಾಲಗಳು ಅವನನ್ನು ಬಾಧಿಸತೊಡಗಿದವು. ಇದ್ದ ಬದ್ಧ ಸ್ಥಿರಾಸ್ತಿ, ಚರಾಸ್ತಿಯನ್ನೆಲ್ಲ ಮಾರಿ ಸಾಲ ತೀರಿಸಿದ. ಇನ್ನು ನಗರದಲ್ಲಿ ವಾಸಿಸುವುದು ಆತನಿಗೆ ಕಷ್ಟವಾಯಿತು. ಆದ್ದರಿಂದ ಉಳಿದ ಪುಟ್ಟ ಮೊತ್ತದಲ್ಲಿ ಹಳ್ಳಿಯ ಕಡೆ ಒಂದು ಮನೆ ಕೊಂಡು ವಾಸಿಸಲು ನಿರ್ಧರಿಸಿ ನಗರದಿಂದ ಹಳ್ಳಿಗೆ ಹೊರಟನು. | |
| 32. | 'ಉಪ್ಪು' ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ.<br>***ಉತ್ತರ :***<br>"ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು<br>ನೀರು ತಾಕಿದರೆ ಮಟಮಾಯ। ಕನ್ನಡದ<br>ಬೆಡಗೀನ ಜಾಣೆ ತಿಳಿದ್ಹೇಳೆ"<br>ಇದು 'ಉಪ್ಪು' ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ. | |
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಪು.ತಿ. ನರಸಿಂಹಾಚಾರ್ ಅವರು ರಚಿಸಿರುವ 'ಏಕಾಂಕ ನಾಟಕಗಳು' ಕೃತಿಯಿಂದ ಆಯ್ದ 'ಶಬರಿ' ಎಂಬ ಗೀತನಾಟಕದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಶ್ರೀರಾಮನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಶಬರಿ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಮತಂಗ ಋಷಿಯ ಆಶ್ರಮದಲ್ಲಿರುತ್ತಾಳೆ. ತಪಸ್ವಿಯಾದ ದನುವಿನ ಸಲಹೆಯಂತೆ ಮತಂಗಾಶ್ರಮವನ್ನು ಪ್ರವೇಶಿಸಿದ ರಾಮಲಕ್ಷ್ಮಣರು ಶಬರಿಯನ್ನು ಕಾಣುತ್ತಾರೆ. ತನ್ನ ಆರಾಧ್ಯದೈವ ಶ್ರೀರಾಮನನ್ನು ಕಂಡು, ಆನಂದಿಸಿ, ಧನ್ಯತೆಯ ಭಾವನೆಯಿಂದ ಮುಕ್ತಿಯನ್ನು ಬಯಸಿದ ಶಬರಿಗೆ ಶ್ರೀರಾಮನು ಮುಕ್ತಿಯನ್ನು ಕರುಣಿಸಿದ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸ್ವಾರಸ್ಯ :*** ರಾಮಲಕ್ಷ್ಮಣರನ್ನು ಆದರ ಆತಿಥ್ಯದಿಂದ ಸತ್ಕರಿಸಿ, ಗೌರವಿಸಿ ತನ್ನ ಬಾಳಿನ ಹಂಬಲ ತೀರಿದ ನಂತರ ಬಾಳು ಅರ್ಥಹೀನವೆಂದು ಭಾವಿಸಿ ಮುಕ್ತಿಯನ್ನು ಪಡೆಯುವ ಶಬರಿಯ ಪರಮಭಕ್ತಿ, ತಾಳ್ಮೆ ಶ್ರೀರಾಮನ ಸರಳ ಹಿತ–ಮಿತ ಮೃದುವಚನ, ಲಕ್ಷ್ಮಣನ ವಿನಯದ ಸಹಚರತೆಯು ಇಲ್ಲಿ ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ. ಶಬರಿಯ ವ್ಯಕ್ತಿತ್ವಕ್ಕೆ 'ಪರೋಪಕಾರಾರ್ಥಂ ಇದಂ ಶರೀರಂ' ಎಂಬ ಉಕ್ತಿಯು ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ. | |
| 34. | "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದೇವನೂರ ಮಹಾದೇವರವರು ರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಬಿಡಿಲೇಖನದಿಂದ ಆಯ್ದುಕೊಂಡ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಒಮ್ಮೆ ದಲಿತಕವಿ ಸಿದ್ದಲಿಂಗಯ್ಯನವರು ಲೇಖಕ ದೇವನೂರ ಮಹಾದೇವ ಅವರಿಗೆ ಹೇಳಿದ ಮನೆಮಂಚಮ್ಮನ ಕಥೆಯಲ್ಲಿ ಮನೆಮಂಚಮ್ಮದೇವಿಗೆ ಊರಿನ ಗ್ರಾಮಸ್ಥರೆಲ್ಲ ಸೇರಿ ಗುಡಿಯನ್ನು ಕಟ್ಟುತ್ತಿದ್ದಾಗ, ಚಾವಣಿಯ ಹಂತಕ್ಕೆ ಬಂದಾಗ ಒಬ್ಬನ ಮೇಲೆ ಆ ದೇವತೆ ಆವಾಹನೆಗೊಂಡು ಈ ಮಾತನ್ನು ಜನರಿಗೆ ಹೇಳುತ್ತಾಳೆ ಎಂಬುದನ್ನು ಲೇಖಕರು ಹೇಳಿದ್ದಾರೆ.<br>***ಸ್ವಾರಸ್ಯ :*** ಸಾಮಾನ್ಯ ಜನರಿಗೆ ಮನೆ ಇಲ್ಲದಿರುವಾಗ ನನಗೇಕೆ ಮನೆ ಎಂಬ ಭಾವನೆ, ಭಕ್ತರ ಬೇಡಿಕೆಯನ್ನು ಈಡೇರಿಸುವ ದೇವಿಯಲ್ಲಿ ಕಾರುಣ್ಯ, ಸಮಾನತೆ, ಹೃದಯ ವೈಶಾಲ್ಯತೆಯನ್ನು ಕಾಣಬಹುದು. | |
| 35. | "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದುರ್ಗಸಿಂಹ ಕವಿ ರಚಿಸಿರುವ 'ಕರ್ಣಾಟಕ ಪಂಚತಂತ್ರಂ' ಕೃತಿಯಿಂದ ಆಯ್ದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಧರ್ಮಬುದ್ಧಿ ಮತ್ತು ದುಷ್ಟಬುದ್ಧಿ ಇವರಿಬ್ಬರ ನಡುವಿನ ವ್ಯಾಜ್ಯವನ್ನು ಬಗೆಹರಿಸಲು ವಟವೃಕ್ಷದ ಬಳಿಗೆ ಬಂದ ಧರ್ಮಾಧಿಕರಣರು ವೃಕ್ಷವನ್ನು ಕುರಿತು ಯಕ್ಷಾದಿ ದಿವ್ಯದೇವತೆಗಳು ವಾಸಮಾಡುವ ವೃಕ್ಷವಾದ ಕಾರಣ ನಿನ್ನನ್ನು ಸಾಕ್ಷಿಯನ್ನಾಗಿ ಮಾಡಿ ಕೇಳುತ್ತಿದ್ದೇವೆ. ನೀನು ತಪ್ಪದೇ ಸತ್ಯವನ್ನು ನುಡಿ ಎಂದಾಗ ಆ ವೃಕ್ಷದ ಪೊಟರೆಯೊಳಗೆ ಅಡಗಿ ಕುಳಿತಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿಯು ಮತಿಗೆಟ್ಟು, ಧರ್ಮವನ್ನು ಬಿಟ್ಟು, ಹೊನ್ನೆಲ್ಲವನ್ನು ಧರ್ಮಬುದ್ಧಿಯೇ ತೆಗೆದುಕೊಂಡನು ಎಂದು ನುಡಿದ ಸಂದರ್ಭದಲ್ಲಿ ಕವಿಯು ಮೇಲ್ಕಂಡ ಮಾತನ್ನು ಆಲಂಕಾರಿಕವಾಗಿ ಹೇಳಿದ್ದಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸ್ವಾರಸ್ಯ :*** ದುಷ್ಟಬುದ್ಧಿಯು ತನ್ನ ವಂಚನೆ, ಕಪಟತನ, ಮೋಸದಿಂದ ತಾನು ಹಾಳಾಗುವುದಲ್ಲದೆ, ಸಂಪತ್ತಿಗಾಗಿ ತನ್ನ ತಂದೆಯನ್ನು ಬಲಿಕೊಡುವ ಹೃದಯ ಹೀನ ಕೃತ್ಯದಿಂದ 'ಮಾಡಿದ್ದುಣ್ಣೊ ಮಾರಾಯ' ಎಂಬ ನೀತಿಯಂತೆ ಕೆಟ್ಟ ಫಲವನ್ನು ಅನುಭವಿಸುವಂತಾಯಿತು ಎಂದು ಅತ್ಯಂತ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ. | |
| 36. | "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯರ ಮೇಲೆ ನಿಶ್ಯಸ್ತ್ರೀಕರಣ ಆದೇಶವನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಬ್ರಿಟಿಷ್ ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ರಾಮ, ಬಾಲ, ಹನುಮ, ಜಡಗ ಮೊದಲಾದ ವೀರರು ದಂಗೆ ಎದ್ದ ಸಂದರ್ಭದಲ್ಲಿ ಈ ಮೇಲ್ಕಂಡ ಮಾತು ಬಂದಿದೆ.<br>***ಸ್ವಾರಸ್ಯ :*** ಬ್ರಿಟಿಷರು ಹೊಸ ಹೊಸ ಕಾಯ್ದೆಗಳನ್ನು ತರುವ ಮೂಲಕ ಭಾರತೀಯರ ಮೇಲೆ ನಿರಂತರವಾಗಿ ದಬ್ಬಾಳಿಕೆ, ದೌರ್ಜನ್ಯಗಳನ್ನು ಮಾಡುತ್ತಿದ್ದರು ಎಂಬುದನ್ನು ಅತ್ಯಂತ ಗಂಭೀರವಾಗಿ ವ್ಯಕ್ತಪಡಿಸಲಾಗಿದೆ. | |
| 37. | "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಡಾ. ಬಿ.ಎಸ್. ಗದ್ದಗಿಮಠ ಇವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಭಾರತೀಯರ ಮೇಲೆ ನಿಶ್ಯಸ್ತ್ರೀಕರಣ ಕಾಯಿದೆಯನ್ನು ಹೇರಿದರು. ಆಯುಧಗಳನ್ನು ಒಪ್ಪಿಸಿದರೆ ಗುಲಾಮಗಿರಿ ಒಪ್ಪಿದಂತೆ, ಇದ್ದೂ ಸತ್ತಂತೆ ಎಂದು ಭಾವಿಸಿ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಏಳುತ್ತಾರೆ. ಬ್ರಿಟಿಷ್ ಅಧಿಕಾರಿಯನ್ನು ಕೊಲ್ಲುತ್ತಾರೆ. ಆಗ 'ಕಾರ' ಸಾಹೇಬ ಹಲಗಲಿಗೆ ಮುತ್ತಿಗೆ ಹಾಕಿ ನಿರ್ದಯೆಯಿಂದ ಎಲ್ಲರನ್ನೂ ಗುಂಡು ಹಾರಿಸಿ ಕೊಂದು, ಹಲಗಲಿಯನ್ನು ಲೂಟಿ ಮಾಡಿ, ಬೆಂಕಿ ಇಟ್ಟು ಹಲಗಲಿಯ ಗುರುತು ಎಳ್ಳಷ್ಟು ಉಳಿಯದಂತೆ ಮಾಡುತ್ತಾರೆ ಎಂಬುದನ್ನು ಲಾವಣಿಕಾರ ಕಥಾನಕವಾಗಿ ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸ್ವಾರಸ್ಯ :*** ಬ್ರಿಟಿಷ್ ಅಧಿಕಾರಿಗಳ ದರ್ಪ, ದೌರ್ಜನ್ಯ, ನಿರಂಕುಶ ಆಡಳಿತ ಹಾಗೂ ಅನಕ್ಷರಸ್ಥರಾಗಿದ್ದರೂ ಬೇಡರಲ್ಲಿದ್ದ ದೇಶಭಕ್ತಿ, ಸ್ವಾತಂತ್ರ್ಯ ಹೋರಾಟದ ಕೆಚ್ಚನ್ನು ಕಾಣಬಹುದು. | |
| 38. | "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು 'ಲಕ್ಷ್ಮೀಶ' ಕವಿ ರಚಿಸಿರುವ 'ಜೈಮಿನಿ ಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯು ವಾಲ್ಮೀಕಿಯ ಆಶ್ರಮವನ್ನು ಪ್ರವೇಶಿಸಿ, ಹಸುರಾದ ಹುಲ್ಲನ್ನು ತಿನ್ನುವಾಗ, ಆ ತೋಟದ ಕಾವಲು ಕಾಯುತ್ತಿದ್ದ ಲವನು ಕುದುರೆಯ ಬಳಿ ಬಂದು ಅದರ ನೆತ್ತಿಯ ಮೇಲಿದ್ದ ಇಡೀ ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ಶ್ರೀರಾಮನೊಬ್ಬನೇ ವೀರನು. ಇದು ಆತನ ಯಜ್ಞದ ಕುದುರೆ. ಇದನ್ನು ನಿರ್ವಹಿಸುವವರು ಯಾರಾದರೂ ಇದ್ದರೆ ಅದನ್ನು ತಡೆಯಲಿ ಎಂದಿರ್ದ ಲೇಖನವನ್ನು ಓದಿ, ಕೋಪಗೊಂಡ ಸಂದರ್ಭದಲ್ಲಿ ಮೇಲ್ಕಂಡ ಮಾತನ್ನು ಹೇಳಿಕೊಳ್ಳುತ್ತಾನೆ. | |
| | ***ಸ್ವಾರಸ್ಯ :*** ಲವಕುಶರು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ, ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುತ್ತಾರೆ. ಕಷ್ಟ–ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕು. ಬಾಲ್ಯ ಸಹಜ ಸಾಹಸ ಪ್ರವೃತ್ತಿ ಹಾಗೂ ಲವನಿಗೆ ತನ್ನ ತಾಯಿಯ ಮೇಲಿದ್ದ ಗೌರವ, ಅಭಿಮಾನಗಳನ್ನು ಇಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ. | |
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ/ಬಿರುದು | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಸಾರಾ ಅಬೂಬಕ್ಕರ್ : | |
| | ***ಉತ್ತರ :*** | |
| | ಲೇಖಕಿ ಸಾರಾ ಅಬೂಬಕ್ಕರ್ ಅವರು 30 ಜೂನ್ 1936 ರಂದು ಕಾಸರಗೋಡಿನಲ್ಲಿ ಜನಿಸಿದರು. ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವುದು ಅಪರೂಪ ಎನ್ನುವ ಸಂದರ್ಭದಲ್ಲಿ ಬರವಣಿಗೆ ಆರಂಭಿಸಿದ ಇವರು ಇಂದು ನಾಡಿನ ಖ್ಯಾತ ಕಥೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆಯನ್ನು ಗಳಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ ಮೊದಲಾದವು ಇವರ ಪ್ರಮುಖ ಕಾದಂಬರಿಗಳು. ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ ಇವು ಕಥಾ ಸಂಕಲನಗಳು. ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ ಲಭಿಸಿವೆ. ಕರ್ನಾಟಕದ ಸಂಸ್ಕೃತಿ ಚಿಂತಕರಲ್ಲಿ ಇವರೂ ಕೂಡ ಒಬ್ಬರಾಗಿದ್ದಾರೆ. | |
| 40. | ಕುಮಾರವ್ಯಾಸ :<br>***ಉತ್ತರ :***<br>ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪ ಗದಗ ಪ್ರಾಂತ್ಯದ ಕೋಳಿವಾಡದಲ್ಲಿ ಕ್ರಿ.ಶ. ೧೪೩೦ ರಲ್ಲಿ ಜನಿಸಿದರು. ಆದಿಕವಿ ಪಂಪನ ಅನಂತರ ವ್ಯಾಸರ ಮಹಾಭಾರತವನ್ನು ಕನ್ನಡದಲ್ಲಿ ಮೊದಲ ಹತ್ತು ಪರ್ವಗಳನ್ನು ರಚಿಸಿ ಪಂಡಿತರಿಗೆ ಮಾತ್ರವಲ್ಲದೇ, ಪಾಮರರಿಗೂ ಕಾಮಧೇನು ಎಂಬ ಗೌರವಕ್ಕೆ ಪಾತ್ರನಾದವನು ಕುಮಾರವ್ಯಾಸ.<br>ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ ಕರ್ಣಾಟ ಭಾರತ ಕಥಾಮಂಜರಿ ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ ಐರಾವತ ಎಂಬ ಕೃತಿಯನ್ನೂ ರಚಿಸಿದ್ದಾನೆಂದು ತಿಳಿದುಬಂದಿದೆ. ರೂಪಕಾಲಂಕಾರವನ್ನು ನಿರರ್ಗಳವಾಗಿ ಪ್ರಯೋಗಿಸಿ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದಾನೆ. ವೀರನಾರಾಯಣನ ಪರಮಭಕ್ತನಾದ ಈತ ಭಾಗವತ ಸಂಪ್ರದಾಯವನ್ನು ಸರಳ, ಸುಂದರ ಹಾಗೂ ರಂಜನೀಯವಾಗಿ ಪರಿಚಯಿಸಿ ಜನಪ್ರಿಯಗೊಳಿಸಿದ್ದಾನೆ. ನಡುಗನ್ನಡ ಕಾವ್ಯ ಪರಂಪರೆಯಲ್ಲಿ ಗದುಗಿನ ಭಾರತ ಅತ್ಯಂತ ಜನಪ್ರಿಯವಾದ ಮಹಾಕಾವ್ಯವಾಗಿದೆ. | |
| 41. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ನೀಲಮೇಘ ............................................<br>...............................................<br>...............................................<br>...............................................<br>.......................... ಹಾರುತಿದೆ ನೋಡಿದಿರಾ ?<br>***ಅಥವಾ***<br>ಯುಗ–ಯುಗಗಳ ....................................<br>...............................................<br>...............................................<br>...............................................<br>.......................... ಹಾರುತಿದೆ ನೋಡಿದಿರಾ ? | $1 \times 4 = 4$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :***<br>ನೀಲಮೇಘ ಮಂಡಲ–ಸಮ ಬಣ್ಣ<br>ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ<br>ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು<br>ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ ?<br>**ಅಥವಾ**<br>ಯುಗ–ಯುಗಗಳ ಹಣೆ ಬರೆಹವ ಒರಸಿ<br>ಮನ್ವಂತರಗಳ ಭಾಗ್ಯವ ತೆರೆಸಿ<br>ರೆಕ್ಕೆಯ ಬೀಸುತ ಚೇತನಗೊಳಿಸಿ<br>ಹೊಸಗಾಲದ ಹಸುಮಕ್ಕಳ ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ ? | |
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :**<br>ವಿಷಯಾಂಶಕ್ಕೆ<br>ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ ಒಟ್ಟು | 1 × 4 = 4<br>3 ಅಂಕಗಳು<br>1 ಅಂಕ<br>4 ಅಂಕಗಳು |
| | ನಿಮಗೆ ಪೊಡೆಮಟ್ಟು ಪೋಪೀ ।<br>ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ ॥<br>ಸಮಕೊಳಿಸಲೆಂದು ಬಂದೆನೆ ।<br>ಸಮರದೊಳೆನಗಜ್ಜ ಪೇಟ್ಮಾವುದು ಕಜ್ಜಂ ॥<br>***ಉತ್ತರ :***<br>ದುರ್ಯೋಧನನು ತನ್ನ ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬಂದಾಗ ಭೀಷ್ಮರು "ಪಾಂಡವರೊಂದಿಗೆ ಯುದ್ಧ ಮಾಡದೇ, ಸಂಧಿಯನ್ನು ಮಾಡಿಕೋ, ಅವರು ಎಂದಿಗೂ ನನ್ನ ಮಾತುಗಳನ್ನು ಮೀರುವವರಲ್ಲ, ನೀನು ಸಹ ಹೇಳಿದ್ದನ್ನು ಮೀರದೆ ಕೇಳು" ಎಂದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದುರ್ಯೋಧನನಿಗೆ ಹೇಳಿದಾಗ, ಆತ ಮುಗುಳ್ನಗೆ ನಕ್ಕು "ತಾತ ನಿಮಗೆ ನಮಸ್ಕರಿಸಿ ನಿಮ್ಮಿಂದ ಆಶೀರ್ವಾದವನ್ನು ಪಡೆದು ಹೋಗುವ ಉದ್ದೇಶದಿಂದ ಬಂದೆನೇ ವಿನಃ ಶತ್ರುಗಳಾದ ಪಾಂಡವರೊಂದಿಗೆ ಸಂಧಿಯ ಒಪ್ಪಂದವನ್ನು ಏರ್ಪಡಿಸು ಎಂದು ಕೇಳಲು ಬಂದೆನೇ. ಅಜ್ಜ ನಾಳೆ ನಡೆಯುವ ಸಮರದಲ್ಲಿ ನನ್ನ ಕೆಲಸ ಯಾವುದು ಹೇಳು" ಎಂದನು. | |
| | ಒಟ್ಟಾರೆಯಾಗಿ ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದೆ, ಯುದ್ಧ ಮಾಡಿಯೇ ತೀರಬೇಕೆಂಬ ದುರ್ಯೋಧನನ ಛಲ ಅವನ ಸ್ವಭಾವಕ್ಕೆ ತಕ್ಕದಾಗಿ ವ್ಯಕ್ತಗೊಂಡಿರುವುದು ಹಾಗೂ ಹಿರಿಯರನ್ನು ಆಧರಿಸಿ ಗೌರವಿಸುವುದು, ವಿನಯ, ಕಾರ್ಯದಕ್ಷತೆಯ ದೃಢನಿಶ್ಚಯ, ಸಮರ್ಥ ನಾಯಕನ ಗುಣಲಕ್ಷಣಗಳು ಈ ಪದ್ಯದಲ್ಲಿ ಕಂಡುಬರುವ ಉತ್ತಮ ಮೌಲ್ಯಗಳಾಗಿವೆ. | |
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | $2 \times 4 = 8$ |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ. | |
| | ***ಅಥವಾ*** | |
| | ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಾಪಿಸಲಾದ 'ಪ್ರಜಾಪ್ರತಿನಿಧಿ ಸಭೆ' ಹಾಗೂ 'ನ್ಯಾಯ ವಿಧಾಯಕ ಸಭೆ'ಯನ್ನು ಕುರಿತು ವಿವರಿಸಿ. | |
| | ***ಉತ್ತರ :*** | |
| | ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದ ನಂತರ ಆಡಳಿತದಲ್ಲಿ, ಕಚೇರಿಯ ಕೆಲಸ ಕಾರ್ಯಗಳಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ವಿಶ್ವೇಶ್ವರಯ್ಯ ಅವರು 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದು, ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಜೊತೆಗೆ ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಹಾಗೂ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ವಿಶ್ವೇಶ್ವರಯ್ಯರವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಹೆಂಚು, ಸಕ್ಕರೆ, ಗಂಧದ ಎಣ್ಣೆ, ಕಾಗದ ಕಾರ್ಖಾನೆ ಹೀಗೆ ನೂರಾರು ಕೈಗಾರಿಕೆಗಳನ್ನು ಆರಂಭಿಸಿದರು. 1913 ರಲ್ಲಿ ಮೈಸೂರು ಬ್ಯಾಂಕ್ ನಂತರ ಉಳಿತಾಯ ಬ್ಯಾಂಕ್, ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್, ಕೈಗಾರಿಕೆ ಹೂಡಿಕೆ ಮತ್ತು ಅಭಿವೃದ್ಧಿ ನಿಧಿ, ಸಾರ್ವಜನಿಕ ಜೀವವಿಮಾ ಯೋಜನೆ, ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಕಾವೇರಿ ನದಿಗೆ ಕನ್ನಂಬಾಡಿ ಜಲಾಶಯ ನಿರ್ಮಾಣ, ರೈಲು ಮಾರ್ಗಗಳ ವಿಸ್ತರಣೆಗೆ ಕ್ರಮ, ಮಾರಿ ಕಣಿವೆ ಜಲಾಶಯದ ನೀರು ಹಂಚಿಕೆಯ ಪುನರ್ವ್ಯವಸ್ಥೆ, ಸಣ್ಣ ನೀರಾವರಿ ವ್ಯವಸ್ಥೆಗೆ ಮರುಜೀವ. ಹೀಗೆ ಅನೇಕ ಕಾರ್ಯಗಳನ್ನು ಅತ್ಯಂತ ಯಶಸ್ವಿಯಾಗಿ ಕಾರ್ಯಗತಗೊಳಿಸಿದರು.

**ಅಥವಾ**

'ಮಾದರಿ ಮೈಸೂರು' ಸಂಸ್ಥಾನದ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರು ಅರಸು ಮನೆತನದಿಂದ ಬಂದವರಾಗಿದ್ದರೂ ಸಹ, ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪರವಾಗಿದ್ದರು.

ಪ್ರಜಾಪ್ರತಿನಿಧಿ ಸಭೆ : ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯು ಜನಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. 1923 ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾಪ್ರತಿನಿಧಿ ಸಭೆಯನ್ನು ಶಾಸನ ಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾಂತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು. ಪ್ರಜಾಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ ಅಂದರೆ ಜೂನ್ 1 ಮಹಾರಾಜರ ವರ್ಧಂತಿ, ಅಕ್ಟೋಬರ್ 2 ದಸರಾ ಮಹೋತ್ಸವ ಸಂದರ್ಭಗಳಲ್ಲಿ ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯಿ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ನಡವಳಿಕೆಗಳು ನಡೆಯುತ್ತಿದ್ದವು. ಪ್ರಜಾಪ್ರತಿನಿಧಿ ಸಭೆಯಲ್ಲಿದ್ದ 275 ಸದಸ್ಯರಲ್ಲಿ ಹೆಚ್ಚು ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು.

ನ್ಯಾಯ ವಿಧಾಯಕ ಸಭೆ : ನಾಲ್ವಡಿ ಕೃಷ್ಣರಾಜ ಒಡೆಯರು 1907 ರಲ್ಲಿ ನ್ಯಾಯ ವಿಧಾಯಕ ಸಭೆಯನ್ನೂ ಸಹ ಸ್ಥಾಪಿಸಿದರು. ಇದರ ಸದಸ್ಯರ ಸಂಖ್ಯೆ 50. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಈ ಸಂಸ್ಥೆ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ಸಹ ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನುಗಳನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ ? ವಿವರಿಸಿ.<br>***ಅಥವಾ***<br>ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.<br>***ಉತ್ತರ :***<br>ನಮ್ಮ ಸುತ್ತಲೂ ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿಯ ಹಣತೆಯನ್ನು ಹಚ್ಚೋಣ. ಬಿರುಗಾಳಿಗೆ ಹೊಯ್ದಾಡುತ್ತಿರುವ ಸಂಸಾರವೆಂಬ ಹಡಗನ್ನು ಎಚ್ಚರಿಕೆಯಿಂದ ಮುಂದೆ ನಡೆಸೋಣ. ನಮ್ಮ ಸುತ್ತಮುತ್ತಲಿನ ಪರಿಸರವು ನಿರಂತರವಾಗಿ ಕಲುಷಿತಗೊಳ್ಳುತ್ತಿದೆ. ಹೀಗೆ ಕಲುಷಿತಗೊಂಡಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗೋಣ. ಬರಡಾಗಿರುವ ಕಾಡುಮೇಡುಗಳಿಗೆ ವಸಂತವಾಗೋಣ. ಸಮಾಜದಲ್ಲಿ ಅನೇಕ ಜನರು ನಾನಾ ಕಾರಣಗಳಿಂದ ಭಯಭೀತರಾಗಿದ್ದಾರೆ. ದುಃಖಿತರಾಗಿದ್ದಾರೆ, ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಅವರಲ್ಲಿ ಹೊಸ ಭರವಸೆಗಳನ್ನು ತುಂಬೋಣ. ಧರ್ಮ, ಜಾತಿ, ಭಾಷೆ ಮುಂತಾದ ಕಾರಣಗಳಿಂದ ಮನುಜ–ಮನುಜರ ನಡುವೆ ಭೇದಭಾವಗಳು ನಿರ್ಮಾಣಗೊಂಡು ದ್ವೇಷ, ಅಸೂಯೆ ಮುಂತಾದವು ಮನೆಮಾಡಿವೆ. ಇವುಗಳನ್ನು ಪ್ರೀತಿ, ವಿಶ್ವಾಸ ಮುಂತಾದವುಗಳ ಮೂಲಕ ಹೋಗಲಾಡಿಸಿ ಮನುಷ್ಯರ ನಡುವೆ ಸಮಾನತೆಯ ಸೇತುವೆಯಾಗೋಣ. ಪ್ರತಿಯೊಂದು ಮತಗಳು ದಾರಿಯನ್ನು ತೋರಿಸುವ ದೀವಿಗೆಗಳು ಎಂಬುದನ್ನು ಅರಿತು ಎಚ್ಚರದಿಂದ ಬದುಕನ್ನು ಮುನ್ನಡೆಸೋಣ. ಭಯ–ಸಂಶಯಗಳಿಂದ ಕಂದಿದ ಕಣ್ಣುಗಳಿಗೆ ನಾಳಿನ ಕನಸುಗಳನ್ನು ಬಿತ್ತುವುದರ ಮೂಲಕ ಅವರಲ್ಲಿ ನವಚೈತನ್ಯವನ್ನು ತುಂಬೋಣ ಎಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ.<br>***ಅಥವಾ***<br>ನಮ್ಮ ಸುತ್ತಲೂ ಆವರಿಸಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಬೇಕೆಂಬ ಸಂಕಲ್ಪ ಮಾಡಿದರೆ, ಅಲ್ಲಿ ಜ್ಞಾನವೆಂಬ ಹಣತೆಯನ್ನು ಹಚ್ಚುವುದರ ಮೂಲಕ ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡಬಹುದಾಗಿದೆ. ಬಿರುಗಾಳಿಗೆ ಹೊಯ್ದಾಡುವ ಸಂಸಾರವೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು ಎಂಬ ಸಂಕಲ್ಪ ಕೈಗೊಂಡರೆ ಜೀವನವನ್ನು ಅತ್ಯಂತ ಸಮತೋಲನದಿಂದ ಮುನ್ನಡೆಸಲು ಸಾಧ್ಯವಾಗುತ್ತದೆ. ಪರಿಸರವು ನಿರಂತರವಾಗಿ ಮಲಿನಗೊಳ್ಳುತ್ತಿರುವುದರಿಂದ ನದೀಜಲಗಳು ಕಲುಷಿತವಾಗಿವೆ. ಹೀಗೆ ಕಲುಷಿತಗೊಂಡಿರುವ ಪರಿಸರವನ್ನು ಸ್ವಚ್ಛ ಮಾಡಬೇಕಾದರೆ ಮುಂಗಾರಿನ ಮಳೆಯ ರೀತಿಯಲ್ಲಿ ಪರಿಸರ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಬರಡಾಗಿರುವ ಕಾಡುಮೇಡುಗಳನ್ನು ಸಂರಕ್ಷಿಸುವ ಸಂಕಲ್ಪ ಮಾಡಿದರೆ ಗಿಡಮರಗಳನ್ನು ನೆಟ್ಟು ಪೋಷಿಸುವ ಕೆಲಸವನ್ನು ಮಾಡಬೇಕು. ಸಮಾಜದಲ್ಲಿ ಅನೇಕ ಜನರು ಭಯಭೀತರಾಗಿ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಇಂಥವರನ್ನು ಮೇಲೆತ್ತಲು ಹೊಸ ಭರವಸೆ, ಆತ್ಮವಿಶ್ವಾಸವನ್ನು ತುಂಬುವುದರ ಮೂಲಕ ಚೈತನ್ಯವನ್ನು ಉಂಟುಮಾಡೋಣ. ಧರ್ಮ, ಜಾತಿ, ಭಾಷೆ ಮುಂತಾದ ಕಾರಣಗಳಿಂದ ಮನುಜ–ಮನುಜರ ನಡುವೆ ಭೇದಭಾವಗಳು ನಿರ್ಮಾಣಗೊಂಡಿವೆ. ಇವುಗಳನ್ನು ಹೋಗಲಾಡಿಸಬೇಕೆಂಬ ಸಂಕಲ್ಪ ಕೈಗೊಂಡರೆ ಮನುಷ್ಯರ ನಡುವೆ ಪ್ರೀತಿ, ವಿಶ್ವಾಸ, ಸಹೋದರತೆ, ಸಹಬಾಳ್ವೆ ಮುಂತಾದ ಮೌಲ್ಯಗಳನ್ನು ಬಿತ್ತೋಣ. ಪ್ರತಿಯೊಂದು ಮತಗಳು ನಮಗೆ ದಾರಿಯನ್ನು ತೋರಿಸುವ ದೀವಿಗೆಗಳು ಎಂಬುದನ್ನು ತಿಳಿಸುವ ಸಂಕಲ್ಪ ಕೈಗೊಂಡರೆ ಪ್ರತಿಯೊಂದು ಧರ್ಮದ ಮಹತ್ತ್ವ, ಮೌಲ್ಯಗಳನ್ನು ತಿಳಿಸುವಂತಹ ಕೆಲಸಗಳನ್ನು ಮಾಡೋಣ. ಭಯ ಮತ್ತು ಅವಮಾನ ಆವರಿಸಿರುವ ಕಣ್ಣುಗಳಲ್ಲಿ ಚೈತನ್ಯ ತುಂಬುವಂತಹ ಸಂಕಲ್ಪ ಕೈಗೊಂಡರೆ ನಾಳಿನ ಸುಂದರ ಬದುಕಿನ ಬಗ್ಗೆ ಕನಸುಗಳನ್ನು ಕಟ್ಟುವಂತಹ ಕೆಲಸಗಳನ್ನು ಮಾಡೋಣ. ಹೀಗೆ ಸಂಕಲ್ಪ ಮತ್ತು ಅನುಷ್ಠಾನ ಕುರಿತು ಕವಿ ಶಿವರುದ್ರಪ್ಪನವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. | |
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $2 \times 2 = 4$ |
| | ಯುದ್ಧ, ಇತಿಹಾಸದುದ್ದಕ್ಕೂ ತನ್ನ ಇರುವಿಕೆಯನ್ನು ತೋರಿಸುತ್ತಾ ಬಂದಿದೆ. ಯಾವುದೇ ಸಾಮ್ರಾಜ್ಯದ ಏಳುಬೀಳುಗಳಲ್ಲಿ ಅದು ಪ್ರಮುಖ ಪಾತ್ರವಹಿಸಿದೆ. ಯುದ್ಧ ನಡೆಯಲು ಕಾರಣಗಳು ಹಲವು. ಸಾಮ್ರಾಜ್ಯ ವಿಸ್ತರಣೆ, ಲೋಭ, ವೀರತೆಯ ಪ್ರದರ್ಶನ ಒಂದು ಕಡೆಯಾದರೆ, ಕುಟುಂಬ ಕಲಹಗಳೂ ಯುದ್ಧಕ್ಕೆ ನಾಂದಿ ಹಾಡಿದ ಘಟನೆಗಳು ದಾಖಲಾಗಿವೆ. ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ ಯುದ್ಧ ಇದಕ್ಕೆ ಸ್ಪಷ್ಟ ನಿದರ್ಶನ. ಕುರುವಂಶದ ರಾಜಕುಮಾರರ ಅಂತಃಕಲಹ ಐವತ್ತು ಲಕ್ಷ ಜನರ ಪ್ರಾಣಹಾನಿಯೊಂದಿಗೆ ಪರ್ಯವಸಾನವಾಯಿತು. ಐತಿಹ್ಯದಂತೆ ಕೇವಲ ಹದಿನೆಂಟು ದಿನ ನಡೆದ ಈ ಯುದ್ಧ, ಕಂಡ ಪರಿಣಾಮ ಅತ್ಯಂತ ಘೋರ.<br><br>ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚಯದಂತೆ ಅಪೂರ್ವಕುಶಲತೆಯನ್ನು ತೋರಿದ ಪ್ರತಿಭಾವಂತನೀತ. ಸರಳ ತಂತ್ರೋಪಾಯಗಳಿಂದ ಚಂದ್ರಗುಪ್ತನ ಶತ್ರುಬಲವನ್ನು ನಿರಾವಲಂಬನಗೊಳಿಸಿ ಮೌರ್ಯ ವಂಶದ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ತನ್ನನ್ನೇ ಹಿಂಬಾಲಿಸಿ ಬಂದ ರಾಜ್ಯಲಕ್ಷ್ಮೀ, ಅಧಿಕಾರಗಳನ್ನು ದೂರೀಕರಿಸಿ ವಿರಕ್ತನಂತೆ ಆಶ್ರಮವಾಸಿಯಾಗುತ್ತಾನೆ. ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳು. ಮೊದಲನೆಯದು ಪ್ರಕಾಶ ಯುದ್ಧ – ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಂಗ್ರಾಮ. ಎರಡನೆಯದು ಕೂಟಯುದ್ಧ – ತಂತ್ರಗಳ ಮೂಲಕ ಯುದ್ಧ ಮಾಡುವುದು. ಮೂರನೆಯದು ಮೌನಯುದ್ಧ – ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತ ಕಾರ್ಯಾಚರಣೆ ನಡೆಸುವುದು. ಯಾವಾಗ ರಾಜ ಶತ್ರುಗಳಿಗಿಂತ ಬಲಿಷ್ಠನಾಗಿದ್ದು ಪರಿಸ್ಥಿತಿ ಅನುಕೂಲಕರವಾಗಿರುತ್ತದೋ ಆಗ ಅವನು ಮುಕ್ತ ಯುದ್ಧವನ್ನೇ ಮಾಡಬೇಕು. ಸೂಚಿತ ಸ್ಥಳದಲ್ಲಿ, ನಿರ್ದಿಷ್ಟ ಸಮಯದಲ್ಲಿ ನಡೆಯುವ ಮುಕ್ತ ಯುದ್ಧವೇ ಧರ್ಮಯುದ್ಧ.<br><br>ಪ್ರಶ್ನೆಗಳು :<br>ಅ) ಚಾಣಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳಾವುವು ? ವಿವರಿಸಿ.<br>ಆ) ಯುದ್ಧಕ್ಕೆ ಕಾರಣವಾದ ಅಂಶಗಳನ್ನು ಒಂದು ನಿದರ್ಶನದೊಂದಿಗೆ ಬರೆಯಿರಿ.<br>***ಉತ್ತರ :***<br>ಅ) ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳಿವೆ. ಮೊದಲನೆಯದು ಪ್ರಕಾಶಯುದ್ಧ – ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ. ಎರಡನೆಯದು ಕೂಟಯುದ್ಧ – ತಂತ್ರಗಳ ಮೂಲಕ ಯುದ್ಧ ಮಾಡುವುದು. ಮೂರನೆಯದು ಮೌನಯುದ್ಧ – ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತ ಕಾರ್ಯಾಚರಣೆ ನಡೆಸುವುದು.<br>ಆ) ಯುದ್ಧ ನಡೆಯಲು ಕಾರಣಗಳು ಹಲವು. ಸಾಮ್ರಾಜ್ಯ ವಿಸ್ತರಣೆ, ಲೋಭ, ವೀರತೆಯ ಪ್ರದರ್ಶನ ಒಂದು ಕಡೆಯಾದರೆ, ಕುಟುಂಬ ಕಲಹಗಳೂ ಯುದ್ಧಕ್ಕೆ ನಾಂದಿ ಹಾಡಿದ ಘಟನೆಗಳು ದಾಖಲಾಗಿವೆ. ಇದಕ್ಕೆ ಒಂದು ಸ್ಪಷ್ಟ ನಿದರ್ಶನ ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ ಯುದ್ಧ. ಕುರುವಂಶದ ರಾಜಕುಮಾರರ ಅಂತಃಕಲಹ ಐವತ್ತು ಲಕ್ಷ ಜನರ ಪ್ರಾಣಹಾನಿಯೊಂದಿಗೆ ಪರ್ಯವಸಾನವಾಯಿತು. ಐತಿಹ್ಯದಂತೆ ಕೇವಲ ಹದಿನೆಂಟು ದಿನ ನಡೆದ ಈ ಯುದ್ಧ, ಕಂಡ ಪರಿಣಾಮ ಅತ್ಯಂತ ಘೋರವಾಗಿತ್ತು. | |
| | **ವಿಭಾಗ – 'ಬಿ'**<br>**(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)**<br>**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | $10 \times 1 = 10$ |
| 46. | 'ಸಪ್ತಮೀ' ವಿಭಕ್ತಿ ಪ್ರತ್ಯಯದ ಕಾರಕಾರ್ಥ<br>(ಎ) ಸಂಬಂಧ (ಬಿ) ಸಂಪ್ರದಾನ<br>(ಸಿ) ಅಧಿಕರಣ (ಡಿ) ಅಪಾದಾನ<br>***ಉತ್ತರ :*** (ಸಿ) ಅಧಿಕರಣ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 47. | 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಜಶ್ತ್ವ ಸಂಧಿ (ಬಿ) ಶ್ಚುತ್ವ ಸಂಧಿ<br>(ಸಿ) ಆದೇಶ ಸಂಧಿ (ಡಿ) ಯಣ್ ಸಂಧಿ<br>***ಉತ್ತರ :*** (ಎ) ಜಶ್ತ್ವ ಸಂಧಿ | |
| 48. | 'ಮಾಡು' ಧಾತುವಿನ ವಿಧ್ಯರ್ಥಕ ರೂಪ<br>(ಎ) ಮಾಡಿಯಾನು (ಬಿ) ಮಾಡದು<br>(ಸಿ) ಮಾಡೀತು (ಡಿ) ಮಾಡಲಿ<br>***ಉತ್ತರ :*** (ಡಿ) ಮಾಡಲಿ | |
| 49. | ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು<br>(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ<br>(ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ<br>***ಉತ್ತರ :*** (ಬಿ) ಸಂಯೋಜಿತ ವಾಕ್ಯ | |
| 50. | ಅನ್ವರ್ಥನಾಮಪದಕ್ಕೆ ಉದಾಹರಣೆಯಾದ ಪದವಿದು<br>(ಎ) ರಾಹುಲ (ಬಿ) ಪರ್ವತ<br>(ಸಿ) ಮನುಷ್ಯ (ಡಿ) ವಿಜ್ಞಾನಿ<br>***ಉತ್ತರ :*** (ಡಿ) ವಿಜ್ಞಾನಿ | |
| 51. | 'ತತ್ಪುರುಷ ಸಮಾಸ'ಕ್ಕೆ ಉದಾಹರಣೆಯಾದ ಪದ<br>(ಎ) ಬೆಟ್ಟದಾವರೆ (ಬಿ) ಮುಕ್ಕಣ್ಣು<br>(ಸಿ) ಅಂಗೈ (ಡಿ) ನೆಯ್ದುವಸ್ತ್ರ<br>***ಉತ್ತರ :*** (ಎ) ಬೆಟ್ಟದಾವರೆ | |
| 52. | ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.<br>(ಎ) ಉದ್ಧರಣ ಚಿಹ್ನೆ (ಬಿ) ಆವರಣ ಚಿಹ್ನೆ<br>(ಸಿ) ವಾಕ್ಯವೇಷ್ಠನ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ<br>***ಉತ್ತರ :*** (ಸಿ) ವಾಕ್ಯವೇಷ್ಠನ ಚಿಹ್ನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 53. | ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.<br>(ಎ) ಅನುಕರಣಾವ್ಯಯ (ಬಿ) ಕ್ರಿಯಾರ್ಥಕಾವ್ಯಯ<br>(ಸಿ) ಸಂಬಂಧಾರ್ಥಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ<br>***ಉತ್ತರ :*** (ಡಿ) ಅವಧಾರಣಾರ್ಥಕಾವ್ಯಯ | |
| 54. | 'ಸ್ಯಾನಿಟರಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ<br>(ಎ) ಹಿಂದೂಸ್ಥಾನಿ (ಬಿ) ಇಂಗ್ಲಿಷ್<br>(ಸಿ) ಗ್ರೀಕ್ (ಡಿ) ಪೋರ್ಚ್‌ಗೀಸ್<br>***ಉತ್ತರ :*** (ಬಿ) ಇಂಗ್ಲಿಷ್ | |
| 55. | ತದ್ಧಿತಾಂತ ಭಾವನಾಮಕ್ಕೆ ಉದಾಹರಣೆಯಾಗುವ ಪದವಿದು<br>(ಎ) ಬಳೆಗಾರ (ಬಿ) ಚಂದ್ರನಂತೆ<br>(ಸಿ) ಕಪ್ಪು (ಡಿ) ಸಿರಿವಂತ<br>***ಉತ್ತರ :*** (ಸಿ) ಕಪ್ಪು | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ಹಾಲೀನು : ಜೋಡುನುಡಿ :: ಮೊಟ್ಟಮೊದಲು : ......................... .<br>***ಉತ್ತರ :*** ದ್ವಿರುಕ್ತಿ | |
| 57. | ವಂಧ್ಯಾ : ಬಂಜೆ :: ಕೋಕಿಲಾ : ......................... .<br>***ಉತ್ತರ :*** ಕೋಗಿಲೆ | |
| 58. | ಚಿತ್ತ : ಮನಸ್ಸು :: ಕೈವಾರ : ......................... .<br>***ಉತ್ತರ :*** ಹೊಗಳಿಕೆ | |
| 59. | ಸಕ್ಕಾರಿ : ಸಕ್ಕರೆ :: ಇಸವಾಸ : ......................... .<br>***ಉತ್ತರ :*** ವಿಶ್ವಾಸ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | 1 × 3 = 3 |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಕೊರಳ ಸೆರೆ ಹಿಗ್ಗಿದವು ದೃಗುಜಲ

ಉರವಣಿಸಿ ಕಡು ನೊಂದನಕಟಾ

ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ

**ಅಥವಾ**

ಅಂತೆಂಬನಾರ್ಗೆ ಪಿರಿದುಂ

ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ

***ಉತ್ತರ :***

U UU | UU — | U U U | UU UU |
ಕೊರಳ | ಸೆರೆ ಹಿ | ಗ್ಗಿದವು | ದೃಗುಜಲ | = ೧೪

U UU | UU UU | — U | UU — |
ಉರವ | ಣಿಸಿ ಕಡು | ನೊಂದ | ನಕಟಾ | = ೧೪

U U U | UU — | — U | — UU | — U | U UU U | — |
ಕುರುಪ | ತಿಗೆ ಕೇ | ಡಾದು | ದೆಂದನು | ತನ್ನ | ಮನದೊಳ | ಗೆ | = ೨೩

ಇದು ಮಾತ್ರಾಗಣ ಛಂದಸ್ಸಿನ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ.

**ಅಥವಾ**

— — | U — U | UU — |
ಅಂತೆಂ | ಬನಾರ್ಗೆ | ಪಿರಿದುಂ | = ೧೨

— U U | — — | U — U | — — | U U — |
ಭ್ರಾಂತು ದ | ಲೇಂ ದ್ರೋ | ಣನೆಂಬ | ನೇಂ ಪಾ | ರ್ವನೆ ಪೇ | = ೨೦

ಇದು ಮಾತ್ರಾ ಗಣ ಛಂದಸ್ಸಿನ ಕಂದ ಪದ್ಯದಲ್ಲಿ ರಚಿತವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 61. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | $1 \times 3 = 3$ |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

"ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು"

***ಅಥವಾ***

ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

***ಉತ್ತರ :***

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

*ಸಮನ್ವಯ :* *ಉಪಮೇಯ* : ಭೀಮ ದುರ್ಯೋಧನರು

*ಉಪಮಾನ* : ಮದಗಜಗಳು

ಉಪಮಾ *ವಾಚಕ ಪದ :* ಅಂತೆ

*ಸಮಾನಧರ್ಮ :* ಹೋರಾಟ

ಇಲ್ಲಿ ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು 'ಹೋರಾಟ' ಎಂಬ ಸಮಾನಧರ್ಮ ಇರುವುದರಿಂದ ಪೂರ್ಣೋಪಮಾಲಂಕಾರ (ಉಪಮಾಲಂಕಾರ)ದ ಲಕ್ಷ್ಯವಾಗಿದೆ.

***ಅಥವಾ***

*ಅಲಂಕಾರದ ಹೆಸರು* : ದೃಷ್ಟಾಂತಾಲಂಕಾರ

*ಲಕ್ಷಣ* : ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥ ಸಾದೃಶ್ಯದಿಂದ ಬಿಂಬ–ಪ್ರತಿಬಿಂಬ ಭಾವವು ತೋರಿ ಬಂದರೆ ಅದು ದೃಷ್ಟಾಂತಾಲಂಕಾರ.

*ಸಮನ್ವಯ :* *ಉಪಮೇಯ* : ಮಾತು ಬಲ್ಲವನಿಗೆ ಜಗಳವಿಲ್ಲ (ಪ್ರತಿಬಿಂಬ)

*ಉಪಮಾನ* : ಊಟ ಬಲ್ಲವನಿಗೆ ರೋಗವಿಲ್ಲ (ಬಿಂಬ)

ಇಲ್ಲಿ 'ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ಉಪಮಾನ ವಾಕ್ಯಕ್ಕೂ 'ಮಾತು ಬಲ್ಲವನಿಗೆ ಜಗಳವಿಲ್ಲ' ಎಂಬ ಉಪಮೇಯ ವಾಕ್ಯಕ್ಕೂ ಅರ್ಥ ಸಾದೃಶ್ಯದಿಂದ ಪರಸ್ಪರ ಬಿಂಬ ಪ್ರತಿಬಿಂಬ ಭಾವವು ಕಂಡುಬರುತ್ತಿರುವುದರಿಂದ ಈ ಮೇಲಿನ ಲಕ್ಷ್ಯವು ದೃಷ್ಟಾಂತ ಅಲಂಕಾರದ್ದಾಗಿದೆ.

(ಈ ಅಲಂಕಾರದಲ್ಲಿ ಬಿಂಬ ಮತ್ತು ಪ್ರತಿಬಿಂಬದ ಅಂಶಗಳು ಅದಲು ಬದಲಾಗಿ ಇರಬಹುದು)

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | * ಹೆತ್ತತಾಯಿ, ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು | |
| | * ಚಿಂತೆಯೇ ಮುಪ್ಪು; ಸಂತೋಷವೇ ಯೌವನ | |
| | * ದೇಶ ನೋಡು; ಕೋಶ ಓದು | |
| | ***ಉತ್ತರ :*** | |
| | ಗಾದೆಯ ಮಹತ್ತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 63. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ನಿಮ್ಮನ್ನು ಸರಗೂರಿನ ಕಾವೇರಿ ಪ್ರೌಢಶಾಲೆಯ 'ಪ್ರಕೃತಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ಕನ್ನಡ ರಾಜ್ಯೋತ್ಸವ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿಜಯವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಮಂಡ್ಯದ ಅನಿಕೇತನ ಪ್ರೌಢಶಾಲೆಯ 'ಪ್ರಾರ್ಥನಾ' ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಭದ್ರಾವತಿಯ ನೇತಾಜಿನಗರದಲ್ಲಿ ವಾಸವಾಗಿರುವ 'ವನಿತ' ಎಂಬ ಹೆಸರಿನ ತಾಯಿಯವರಿಗೆ ಒಂದು ಪತ್ರ ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಖಾಸಗಿ / ತಾಯಿಯವರಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 64. | **ಪ್ರಬಂಧ ಬರೆವಣಿಗೆ :** | 1 × 5 = 5 |
| | ✳ ಜನಸಂಖ್ಯಾ ಸ್ಫೋಟಕ್ಕೆ ಕಾರಣ ಹಾಗೂ ಪರಿಹಾರೋಪಾಯ | |
| | ✳ ರಾಷ್ಟ್ರೀಯ ಭಾವೈಕ್ಯತೆ | |
| | ✳ ಜಾಗತಿಕ ತಾಪಮಾನ ಹೆಚ್ಚಳದಿಂದಾಗುವ ದುಷ್ಪರಿಣಾಮ ಹಾಗೂ ಪರಿಹಾರಗಳು | |
| | ***ಉತ್ತರ :*** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |